ದಿನಾಂಕಃ 19.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಆರ್ ಎ 5035/2019 ರ ಆದೇಶದ ಮೇರೆಗೆ ರೆಸ್ಟೋರ್ ಆಗಿದ್ದು, ಆ ಪ್ರಕಾರ ಪಾಟೀ ಸವಾಲು 9 ನೇ ಪ್ರತಿವಾದಿ ಪರ ಃ ಶ್ರೀ ಸಿ ಎಸ್ ಎಸ್ ವಕೀಲರಿಂದಃ

5. ನನ್ನ ಅಣ್ಣ ಕುಮಾರ ಎಲ್ಲಿ ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣ ಕುಮಾರ ಮೈಸೂರಿನಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣ ಕುಮಾರನಿಗೆ ಮೈಸೂರಿನಲ್ಲಿ ಸ್ವಂತ ಮನೆಯಿದ್ದು ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಅಣ್ಣ, ತಾಯಿ ಮತ್ತು ಕುಟುಂಬದವರು 9 ನೇ ಪ್ರತಿವಾದಿಯ ಹೆಸರಿಗೆ ಕ್ರಯ ಪತ್ರದಂತೆ ಖಾತೆ ಆಗಬಾರದು ಎಂದು ತಕರಾರನ್ನು ಶ್ರೀರಂಗಪಟ್ಟಣದ ಆರ್ ಐ ರವರ ಸಮ್ಮುಖದಲ್ಲಿ ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ ತಕರಾರನ್ನು ತಹಶೀಲ್ದಾರ್ ಕಚೇರಿಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿ. ಸದರಿ ಪ್ರಕರಣವನ್ನು RRT(2) ViVa No.31/2012-13 ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ನಾನು 2 ನೇ ತರಗತಿ ಓದಿದ್ದು, ಸಹಿಯನ್ನು ಕನ್ನಡದಲ್ಲಿ ಮಾಡುತ್ತೇನೆ. ದಿಃ 29.12.2010 ರಂದು ನಾನು ನನ್ನ ಅಣ್ಣ ಕುಮಾರ್ ಗೆ ಸಾಮಾನ್ಯ ಅಧಿಕಾರಿ ಪತ್ರವನ್ನು ನೋಟರಿಯವರ ಸಮ್ಮುಖ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸರಸ್ವತಿಯವರಿಗೆ ನನ್ನ ಅಣ್ಣ ಕುಮಾರ್ ಕ್ರಯಕ್ಕೆ ಬರೆದುಕೊಟ್ಟ ಪತ್ರಕ್ಕೆ ಒಪ್ಪಿಗೆ ಇದೆ ಎಂದು ನಾನು ಅಧಿಕಾರ ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

6. ನನ್ನ ಅಣ್ಣ ಪರಿಸ್ವಾಮಿ ಈಗ ಮರಣ ಹೊಂದಿದ್ದು, ಆತನ ಹೆಂಡತಿ ತಲಕಾಡಿನಲ್ಲಿ ವಾಸವಾಗಿರುತ್ತಾರೆ. ನಮ್ಮ ಮನೆಯಲ್ಲಿ ಯಾವುದೇ ವಿಚಾರ ನಡೆದರೂ ನನ್ನ ತಾಯಿ ನನ್ನ ಗಮನಕ್ಕೆ ತರುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಸಣ್ಣಮ್ಮ ಕುಮಾರ್ ರವರ ಮಗ ರಾಜುಗೆ ದಿಃ 22.09.2004 ರಂದು ಸರ್ವೆ ನಂ. 64/2 ಬಿ ರಲ್ಲಿ 23 ಗುಂಟೆಯನ್ನು ದಾನಪತ್ರದ ಮೂಲಕ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿಗೆ ಹೆದರಿಸಿ - ಬೆದರಿಸಿ ಬರೆಸಿಕೊಂಡಿರಬೇಕು ಎಂದು ನುಡಿಯುತ್ತಾರೆ. ದಾನ ಪತ್ರದ ವಿಚಾರವು ನನಗೆ 2004 ರಲ್ಲಿ ಗೊತ್ತಿತ್ತು ಎಂದರೆ ಸರಿಯಲ್ಲ. ಸದರಿ ದಾನ ಪತ್ರ ಆದ ವಿಚಾರ ನನಗೆ ಕೇಸು ಹಾಕಿದ ನಂತರ ಗೊತ್ತಾಗಿರುತ್ತದೆ.

**ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಪಾಟೀ ಸವಾಲಿಗಾಗಿ ಮುಂದೂಡಲಾಗಿದೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ